## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಅಫಜಲಪೂರ

C.C No. 293/2018
PW-5

ಉದ್ಘೋಷಣಾ ಜಾರಿಕಾರ

ಹೆಸರು ಃ ಶಾಂತೇಶ್ವರ
ತಂ/ಗಂ ಹೆಸರು ಃ ಕೆಂಚಪ್ಪ
ವಯಸ್ಸು ಃ 39 ವರ್ಷ
ಉದ್ಯೋಗ ಃ HC-332
ವಾಸ ಸ್ಥಳ ಃ ದೇವಲಗಾಣಗಾಪುರ ಪೋಲಿಸ ಠಾಣೆ ದೇವಲಗಾಣಗಾಪುರ

---

ದಿಃ **01-12-2025** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಲಾಯಿತು.

ದಂಡ ಪ್ರಕ್ರಿಯಾ ಸಂಹಿತೆ ಕಲಂ.**299** ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

ದಿಃ 02-07-2022 ರಿಂದ ಸದರಿ ವರೆಗೆ ನಾನು ದೇವಲಗಾಣಗಾಪುರ ಪೋಲಿಸ ಠಾಣೆಯಲ್ಲಿ ಪೋಲಿಸ ಮುಖ್ಯಪೇದೆಯಾಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ.

ದಿಃ 24-04-2025 ರಂದು ಈ ಪ್ರಕರಣದಲ್ಲಿ ಆರೋಪಿತನ ವಿರುದ್ಧ ಪ್ರೊಕ್ಲಮೇಶನ ಜಾರಿ ಮಾಡಲು ಕಲಬುರಗಿಯ ಆರ್.ಜಿ. ನಗರ ಪೋಲಿಸ ಠಾಣೆಗೆ ಹೋಗಿ ಸದರಿ ಅವರ ಸಹಾಯದಿಂದ ಸ್ಥಳಿಯ ಇಬ್ಬರ ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡಿರುತ್ತೇನೆ. ಸದರಿಯವರ ಹೆಸರು ಆಸಿಪ್ ಅಲಿ ತಂದೆ ಗಪೂರ ಪಟೇಲ ಮತ್ತು ಮಹ್ಮದ ಇರ್ಫಾನ್ ತಂದೆ ಶೇಖ ಅಬ್ದುಲ ಸೌದಾಗರ ಎಂದು ತಿಳಿಸಿದ್ದು ಅವರಿಗೆ ಆರೋಪಿತನ ವಿರುದ್ಧ ಹೊರಡಿಸಿದ ಉದ್ಘೋಷಣಾ ವಾರಂಟ ಜಾರಿಯ ಕುರಿತು ತಿಳಿಸಿ ಒಂದು ವೆಳೆ ಆರೋಪಿತನು ಸಿಗದೇ ಇರುವ ಪಕ್ಷದಲ್ಲಿ ಉದ್ಘೋಷಣಾ ಜಾರಿಗೊಳಿಸಲು ಪಂಚರಾರಿ ಸಹಕರಿಸಲು ಕೇಳಿಕೊಂಡಿದ್ದು ಸದರಿಯವರು ಒಪ್ಪಿಕೊಂಡಿದ್ದು ತದ ನಂತರ ಪಂಚರೊಂದಿಗೆ ಆಳಂದ ಚೆಕ್ ಪೋಸ್ಟ , ಇಂದಿರಾ ಕ್ಯಾಂಟಿನ , ಶಹ ಬಜಾರ ಬಸ್ ನಿಲ್ದಾಣ ಹತ್ತಿರ ಮತ್ತು ವುಹಾನಗರ ಪಾಲಿಕೆಯ ಹತ್ತಿರ ಹೋಗಿ ಜನರಿಗೆ ಕೇಳಿ ಸದರಿ ಸ್ಥಳಗಳಲ್ಲಿ ಜನರಿಗೆ ಕಾಣಿಸುವ ಹಾಗೆ ಉದ್ಘೋಷಣಾ ಪತ್ರವನ್ನು ಗೊಡೆಗೆ ಅಂಟಿಸಿರುತ್ತೇನೆ ಮತ್ತು ಡಂಗುರ ಸಾರಿರುತ್ತೇನೆ ಮತ್ತು

ಸ್ಥಳದಲ್ಲಿ ತೆಗೆದುಕೊಂಡ ಸ್ಥಳ ಪಂಚನಾಮೆ ಕಾಲಕ್ಕೆ ಭಾವಚಿತ್ರ ಗಳನ್ನು ತೆಗೆದುಕೊಂಡಿರುತ್ತೇನೆ. ಅದರಂತೆ ಮಾನ್ಯ ನ್ಯಾಯಾಲಯವು ಆರೋಪಿತನ ವಿರುದ್ಧ ಹೊರಡಿಸಿದ ಜಪ್ತಿ ಪಂಚನಾಮೆಯನ್ನು ಮಾಡುವ ಸಲುವಾಗಿ ತಾಲೂಕಾ ದಂಡಾಧಿಕಾರಿ ಮತ್ತು ಮಹಾನಗರ ಪಾಲಿಕೆ ಕಲಬುರಗಿ ರವರಲ್ಲಿ ಆರೋಪಿತನ ಹೆಸರಿನಲ್ಲಿ ಇರುವ ಯಾವುದಾದರು ಚರ ಮತ್ತು ಸ್ಥಿರ ಆಸ್ತಿಯ ಕುರಿತು ಮಾಹಿತಿ ಕೋರಿದ್ದು ಸದರಿಯವರು ಆರೋಪಿತನ ಹೆಸರಿನಲ್ಲಿ ಯಾವುದೇ ಚರ ಮತ್ತು ಸ್ಥಿರ ಆಸ್ತಿ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸಾಕ್ಷಿಗೆ ಉದ್ಘೋಷಣಾ ಜಾರಿ ವರದಿಯ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿತಸಿದ್ದು ಅದನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಉದ್ಘೋಷಣಾ ಜಾರಿ ಪಂಚನಾಮೆಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರವನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

ಆರೋಪಿ ಹೆಸರಿನಲ್ಲಿ ಯಾವುದೆ ಚರಾ ಮತ್ತು ಸ್ಥಿರ ಆಸ್ತಿ ಇರುವ ಕುರಿತು ಮಾನ್ಯ ತಹಶೀಲ್ದಾರ ಕಾರ್ಯಾಲಯ ಕಲಬುರಗಿ ಹಾಗೂ ಮಹಾನಗರ ಕಲಬುರಗಿ ಕಾರ್ಯಾಲಯ ರವರು ನೀಡಿದ ಪ್ರತಿಗಳನ್ನು ಸಾಕ್ಷಿಗೆ ತೋರಿಸಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 6 ಮತ್ತು 7 ಎಂದು ಗುರುತಿಸಲಾಯಿತು.

ಆರೋಪಿ ಹೆಸರಿನಲ್ಲಿ ಯಾವುದೆ ಚರಾ ಮತ್ತು ಸ್ಥಿರ ಆಸ್ತಿ ಇಲ್ಲದ ಕುರಿತು ಮಾನ್ಯ ತಹಶೀಲ್ದಾರ ಕಾರ್ಯಾಲಯ ಕಲಬುರಗಿ ಹಾಗೂ ಮಹಾನಗರ ಕಲಬುರಗಿ ಕಾರ್ಯಾಲಯ ರವರು ನೀಡಿದ ವರದಿಗಳನ್ನು ಸಾಕ್ಷಿಗೆ ತೋರಿಸಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು.

**<u>ಮರು ವಿಚಾರಣೆಃ - ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ